ಅವರ ಕಡೆ ದಿಟ್ಟಿಸಿ ಮಹಾರಾಜ್ ಹೇಳಿದರು, ''ನೋಡು ಮಗೂ, ನೀವೆಲ್ಲ ನಿಮ್ಮ ವಿಚಾರವಾಗಿ ಚಿಂತಿಸಿ. ನನಗೇನೂ ಚಿಂತೆಯಿಲ್ಲ, ನನಗೆ ಗೊತ್ತು, ಈ ಶರೀರದ ಮೂಲಕ ಏನೇನು ಮಾಡಬೇಕಾಗಿತ್ತೋ ಅದನ್ನೆಲ್ಲ ಮಾಡಿದ್ದಾಗಿದೆ. ಈಗ ಈ ಶರೀರ ಮರದ ಕೆಳಗೆ ಬಿದ್ದುಬಿಡಲಿ, ನರ್ಮದೆಯಲ್ಲಿ ಬೀಳಲಿ, ದೇವತೆಯ ಬಾಗಿಲ ಬಳಿ ಬೀಳಲಿ – ಯಾವುದೂ ಬರುವುದಿಲ್ಲ, ಹೋಗುವುದಿಲ್ಲ.'' ಇದು ಅವರ ಅನುಭವದ ಗಟ್ಟಿತನ. ಇಂಥ ಮಾತುಗಳನ್ನು ಅನೇಕರು ಹೇಳಬಲ್ಲರು. ಆದರೆ ಎಷ್ಟು ಜನ ಅನುಭವ ಮಾಡಿಕೊಳ್ಳಬಲ್ಲರು? ನಮ್ಮ ಗುಂಪಿನಲ್ಲಿ ೧೦–೧೧ ಮಂದಿ ಇದ್ದೆವು. ನಾವೆಲ್ಲ ಮಾತುಬಾರದೆ ನಿಂತುಬಿಟ್ಟಿದ್ದೆವು. ತುಸು ಸಾವರಿಸಿಕೊಂಡು ನಾವು, ''ಮಹಾರಾಜ್, ನಾವು ತುಸು ನಡೆದಾಡುತ್ತೇವೆ'' ಎಂದೆವು. ಅವರು ಕೈಯಲ್ಲಿದ್ದ ಕೋಲನ್ನು ತಿರುಗಿಸುತ್ತ, ಆಗಾಗ ನೆಲಕ್ಕೆ ಟಕ್ ಟಕ್ ಎಂದು ಸದ್ದು ಬರುವಂತೆ ಕುಟ್ಟುತ್ತಾ ಹೇಳಿದರು, ''ನನಗೇನೂ ಚಿಂತೆಯಿಲ್ಲ, ಈ ದೇಹ ಮರದಡಿಯಲ್ಲಿ ಬೀಳಲಿ, ನರ್ಮದಾ ನದಿಯಲ್ಲಿ ಬೀಳಲಿ, ದೇವತೆಯ ಬಾಗಿಲ ಬಳಿ ಬೀಳಲಿ, ಯಾವುದೂ ಬರುವುದಿಲ್ಲ, ಹೋಗುವುದಿಲ್ಲ.''

ಸ್ವಾಮಿ ಮಾಧವಾನಂದರು ಸ್ವಾಮಿ ವಿವೇಕಾನಂದರ ಕರ್ಮಯೋಗವನ್ನು ಅವಲಂಬಿಸಿ ಅತ್ಯುನ್ನತ ಅವಸ್ಥೆಯನ್ನು ತಲುಪಿದ್ದರು; ಸ್ವಾಮಿ ಶಾಂತಾನಂದಜಿ ಭಕ್ತಿಭಾವದ ಶಿರೋಮಣಿಯಾಗಿದ್ದರು. ಸ್ವಾಮಿ ಜಗದಾನಂದಜಿ ಜ್ಞಾನಮಾರ್ಗದ ಸಿದ್ಧಿಗೆ ದೃಷ್ಟಾಂತವಾಗಿ ನಿಲ್ಲುತ್ತಾರೆ. *(ಸಮಾಪ್ತಿ)* *

## ಸ್ವಾಮಿ ವಿವೇಕಾನಂದರ ದಿವ್ಯವಾಣಿ



◆ ಮನುಷ್ಯನ ಶೀಲವನ್ನು ನೀವು ನಿಜವಾಗಿಯೂ ಪರೀಕ್ಷೆ ಮಾಡಲು ಬಯಸಿದರೆ, ಆತನು ಮಾಡುವ ದೊಡ್ಡ ಕಾರ್ಯಗಳಿಗೆ ಗಮನ ಕೊಡಬೇಡಿ. ಒಬ್ಬ ಹೆಡ್ಡನು ಕೂಡ ಎಂದಾದರೂ ಒಂದು ಸಮಯದಲ್ಲಿ ಶೂರನಾಗಬಹುದು. ಮನುಷ್ಯನು ಮಾಡುವ ಸಣ್ಣ ಕಾರ್ಯಗಳನ್ನು ನೋಡಿರಿ.

◆ ನಮ್ಮ ಪ್ರಥಮ ಕರ್ತವ್ಯ ಆತ್ಮನಿಂದೆಯ ತ್ಯಾಗ. ಏಕೆಂದರೆ ನಮ್ಮ ಏಳಿಗೆಗೆ ಮೊದಲು ಬೇಕಾದುದು ಆತ್ಮವಿಶ್ವಾಸ. ತರುವಾಯ ಈಶ್ವರನಲ್ಲಿ ವಿಶ್ವಾಸ. ಆತ್ಮಶ್ರದ್ಧಾವಿಹೀನನಿಗೆ ಈಶ್ವರಶ್ರದ್ಧೆ ಎಂದಿಗೂ ಸಾಧ್ಯವಾಗದು.

◆ ನೀನು ಸ್ವಾಮಿಯಂತೆ ಕರ್ಮಮಾಡು, ಗುಲಾಮನಂತೆ ಮಾಡಬೇಡ. ಅನವರತವೂ ಕಾರ್ಯಮಾಡು, ಆದರೆ ಜೀತಗಾರನಂತೆ ದುಡಿಯದಿರು. ಸ್ವಾತಂತ್ರ್ಯಭಾವನೆಯಿಂದ ಕೆಲಸ ಮಾಡಿ, ಪ್ರೇಮಭಾವನೆಯಿಂದ ಕೆಲಸ ಮಾಡಿ. ಸ್ವಾರ್ಥಕಾರ್ಯವೆಲ್ಲವೂ ಗುಲಾಮನ ಕಾರ್ಯ.

◆ ಗುಲಾಮರಂತೆ ಕರ್ಮಮಾಡುವುದರ ಫಲ, ಸ್ವಾರ್ಥ ಮತ್ತು ವಿಷಯಾಸಕ್ತಿಯಾದರೆ, ನಿಃಸ್ವಾರ್ಥರಾಗಿ ನಿಮ್ಮ ಮನಸ್ಸಿಗೆ ನೀವೆ ಒಡೆಯರಂತೆ ಕಾರ್ಯಮಾಡುವುದರ ಫಲ ಅನಾಸಕ್ತಿಯ ಆನಂದಪ್ರಾಪ್ತಿ.

◆ ನೀವು ಸಮರ್ಪಕವಾಗಿ ಕೆಲಸ ಮಾಡಲು ಶಕ್ತರಾಗುವುದು ಯಾವಾಗ ಎಂದರೆ, ನೀವು ಸ್ವಮತಭ್ರಾಂತಿಯನ್ನು ಬಿಟ್ಟಾಗ ಮಾತ್ರ. ಸತ್ಕಾರ್ಯವನ್ನು ಮಾಡಿ ಅದರಿಂದ ತಾನು ಒಳ್ಳೆಯದನ್ನು ಪಡೆಯುವವನು ಯಾರೆಂದರೆ ಸಮಬುದ್ಧಿಯುಳ್ಳವನು. ಶಾಂತನು, ವಿವೇಕಿಯು, ಗಾಬರಿಪಡದವನು, ಅಧಿಕವಾದ ಸಹಾನುಭೂತಿ ಪ್ರೇಮಗಳುಳ್ಳವನು. ಸ್ವಮತಭ್ರಾಂತನು ಮರುಳನು, ಸಹಾನುಭೂತಿಯಿಲ್ಲದವನು. ಆತನೆಂದಿಗೂ ಪ್ರಪಂಚವನ್ನು ನೆಟ್ಟಗೆ ಮಾಡಲಾರ.

◆ ಪ್ರತಿಯೊಂದು ಕರ್ತವ್ಯವೂ ಪವಿತ್ರ. ಕರ್ತವ್ಯಪರಾಯಣತೆಯೇ ಶ್ರೇಷ್ಠ ಭಗವದುಪಾಸನೆ. ಬದ್ಧಜೀವಿಗಳನ್ನು, ಅಜ್ಞಾನದಲ್ಲಿ ನರಳುತ್ತಿರುವವರನ್ನು ಉದ್ಧರಿಸಲೆತ್ನಿಸುವುದು ಒಂದು ಮಹದುಪಕಾರವೇ ಸರಿ.

◆ ಒಂದು ಇರುವೆ ಕೂಡ ನಿಮ್ಮ ಸಹಾಯವಿಲ್ಲದಿದ್ದರೆ ಸಾಯುವುದು ಎಂದು ಭಾವಿಸುವಿರೇನು? ಇದೊಂದು ಭಯಂಕರ ಈಶ್ವರನಿಂದೆ. ಪ್ರಪಂಚಕ್ಕೆ ನೀವು ಬೇಕಾಗಿಯೇ ಇಲ್ಲ. ಪ್ರಪಂಚ ತನ್ನ ಪಾಡಿಗೆ ತಾನು ನಡೆಯುತ್ತಿರುವುದು. ನೀವು ಸಿಂಧುವಿನಲ್ಲಿರುವ ಬಿಂದುವಿನಂತೆ. ಅವನ ಆಣತಿಯಿಲ್ಲದೆ ಒಂದು ಎಲೆಯೂ ಕದಲಲಾರದು. ಅವನಿಗೆ ಸೇವೆ ಮಾಡುವ ಒಂದು ಅವಕಾಶ ದೊರಕಿದುದರಿಂದ ಧನ್ಯರು ನಾವು. ಸಹಾಯ ಎಂಬ ಪದವನ್ನು ನಿಮ್ಮ ಮನಸ್ಸಿನಿಂದ ನಿರ್ಮೂಲ ಮಾಡಿ.

◆ ನೀವು ಸಹಾಯ ಮಾಡಲಾರಿರಿ. ಇದು ಈಶ್ವರನಿಂದೆ. ನೀವು ಅವನ ಇಚ್ಛೆಯಂತೆ ಇಲ್ಲಿರುವಿರಿ. ನೀವು ಅವನಿಗೆ ಸಹಾಯ ಮಾಡುವೆ ಎಂದು ಭಾವಿಸಿರುವಿರೇನು? ನೀವು ಪೂಜಿಸಬಲ್ಲಿರಿ.


◆ ನೀವು ನಾಯಿಗೊಂದು ತುತ್ತು ಅನ್ನವನ್ನು ಕೊಟ್ಟರೆ ನೀವು ನಾಯಿಯನ್ನು ದೇವರೆಂದು ಪೂಜಿಸುವಿರಿ ಎಂದೇ ಅರ್ಥ. ದೇವರು ಆ ನಾಯಿಯಲ್ಲಿರುವನು, ಅವನೇ ಅದಾಗಿರುವನು, ಅವನೇ ಸರ್ವಸ್ವವಾಗಿದ್ದಾನೆ, ಅವನೇ ಎಲ್ಲದರಲ್ಲಿಯೂ ಇರುವನು. ಅವನನ್ನು ಪೂಜಿಸುವುದಕ್ಕೆ ನಮಗೊಂದು ಅವಕಾಶ ದೊರಕಿದೆ. ಪ್ರಪಂಚದ ಎದುರಿಗೆ ಇಂತಹ ಗೌರವಭಾವದಿಂದ ನಿಲ್ಲಿ, ಆಗ ಮಾತ್ರ ಪೂರ್ಣ ಅನಾಸಕ್ತಿ ಬರುವುದು. ಇದು ನಿಮ್ಮ ಕರ್ತವ್ಯವಾಗಬೇಕು. ಕೆಲಸ ಮಾಡುವುದಕ್ಕೆ ಇದೇ ಸರಿಯಾದ ಮನೋಭಾವ. ಕರ್ಮಯೋಗ ಸಾರುವ ರಹಸ್ಯವೇ ಇದು. *

# ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ**

ಕನ್ನಡಕ್ಕೆ: **ಕುಮಾರಿ ಪಿ.ಉಷಾ**

**ಭಾಗ-೨**



**ಮೇ ೧೮, ೧೯೩೫, ಬುದ್ಧಪೂರ್ಣಿಮೆ :** ಸಂಜೆ ೭ರ ಹೊತ್ತಿಗೆ ರೈಲಿನಲ್ಲಿ ಪ್ರಯಾಣ ಮಾಡಿ ಬಂದ ಒಬ್ಬರು ಸಾಧುಗಳೊಡನೆ ಭಕ್ತನು ಮಹಾತೀರ್ಥ ಸಾರಗಾಛಿಗೆ ಬಂದಿದ್ದಾನೆ. ನಾಳೆ ವಾರ್ಷಿಕ ಮಹೋತ್ಸವ. ನೆರೆದಿದ್ದ ಭಕ್ತರು ಕೇಳುತ್ತಿದ್ದಾರೆ, ''ಬಾಬಾ ಹೇಗಿದ್ದೀರಿ?'' ಹಾಲ್‌ನಲ್ಲಿ ಕುಳಿತಿರುವ ಬಾಬಾ, ''ಬಹಳ ಆನಂದದಿಂದಿದ್ದೇನೆ. ಇಲ್ಲಿಂದ ಮೇಲಿನದು ಬಹಳ ಚೆನ್ನಾಗಿದೆ. ತೊಂದರೆಯೆಲ್ಲಾ ಕೆಳಗೆ ಮಾತ್ರ. ಯಾರಾದರೂ ಕತ್ತರಿಸಿ ತೆಗೆದು ಹಾಕಿದ್ದರೆ ಚೆನ್ನಾಗಿರುತ್ತಿತ್ತು. ಹ್ಹಾ ಹ್ಹಾ ! ವೃದ್ಧ ಶಿಶು ತಾನು ಮಾಡಿದ ತಮಾಷೆಗೆ ತಾನೇ ಸಂತೋಷಪಡುತ್ತಿದೆ.'' ಭಕ್ತರು ಅಂದುಕೊಂಡರು, ಅಖಂಡಾನಂದ ಎಂಬ ಹೆಸರು ಸಾರ್ಥಕವಾಯಿತು ಎಂದು.

ಒಬ್ಬ ಯುವಕ ಭಕ್ತನು ಕಲ್ಕತ್ತೆಯಿಂದ ಬಂದಿದ್ದಾನೆ. ಅವನು ತನ್ನ ಮನಸ್ಸಿನ ಸ್ಥಿತಿಯನ್ನು ಪತ್ರದ ಮೂಲಕ ಬಾಬಾಗೆ ತಿಳಿಸಿದ್ದನೆಂದು ತೋರುತ್ತದೆ. ಅವನು ಪ್ರಣಾಮ ಮಾಡಿ ಏಳುತ್ತಲೇ ಬಾಬಾ ಹೇಳಿದರು, ''ನಾನೇನು ಮಾಡಲಿ? ಕೊಡಬೇಕಾದ್ದನ್ನು ಒಮ್ಮೆಲೆ ಕೊಟ್ಟುಬಿಟ್ಟಿದ್ದೇನೆ. ಇನ್ನು ಮುಂದಿನದು ನಿನ್ನ ಕೆಲಸ. ಶಾಂತಿ ಸಿಗುತ್ತಿಲ್ಲ. ಅಶಾಂತಿ, ಸಂಸಾರ ಹಿಡಿಸುತ್ತಿಲ್ಲ ಎನ್ನುತ್ತೀಯೆ. ಸಂಸಾರದಲ್ಲಿರಲು ಯಾರು ತಾನೆ ಹೇಳಿದರು? ಕಾಡು, ಅರಣ್ಯಗಳಿವೆ, ಇಷ್ಟೊಂದು ಆಶ್ರಮಗಳಿವೆ – ಅಲ್ಲಿಗೆ ಹೋಗಬಹುದಲ್ಲ? ಸಾಧುಸಂಗ ಬೇಕು, ಕೆಲಸವಿರಬೇಕು. ಆಗಲೇ ಶಾಂತಿ ದೊರೆಯುವುದು. ಮನಸಾರೆ ಕೆಲಸಮಾಡು. ನಾಳೆ ದೇವರ ಉತ್ಸವ – ಕೆಲಸಮಾಡು ನೋಡೋಣ. ಸಾಕೆನಿಸುವಷ್ಟು ಕೆಲಸ ಮಾಡಬೇಕು. ಬಳಲಿ ಬೆಂಡಾಗುವಷ್ಟು ಕೆಲಸ ಮಾಡು. ಆಗ ನಿನಗೆ ಶಾಂತಿ, ಆನಂದ ಸಿಗುವುದಿಲ್ಲವೋ ನೋಡುತ್ತೇನೆ. ಇಂದಿನಿಂದಲೇ ಕಾರ್ಯದಲ್ಲಿ ತೊಡಗು – ಏನು ಕೆಲಸ ಮಾಡಬೇಕೆಂದು ನೋಡಿ, ಕೇಳಿ ತಿಳಿದುಕೋ.''

ಮಾರನೇ ದಿನದ ಮಧ್ಯಾಹ್ನ ಮಹೋತ್ಸವದ ಅಂಗವಾಗಿ ಒಂದು ಸಭೆಯನ್ನೇರ್ಪಡಿಸಲಾಗಿದೆ. ಅಲ್ಲಿ ಮಾಡುವ ಭಾಷಣವನ್ನು ಬಾಬಾ ಬರೆಸುತ್ತಿದ್ದಾರೆ. ಸಂಜೆ 'ವಿನೋದ ಕುಟೀರ'ದ ಜಗುಲಿಯ ಕ್ಯಾಂಪ್‌ಕಾಟ್‌ನಲ್ಲಿ ಮಲಗಿ ಬಾಬಾ ಅದನ್ನು ಹೇಳುತ್ತಿದ್ದಾರೆ, ಸಾಧುಗಳೊಬ್ಬರು ಬರೆದುಕೊಳ್ಳುತ್ತಿದ್ದಾರೆ. ಕೆಲವು ಕ್ಷಣಗಳ ನಂತರ ಬಾಬಾ ಎದ್ದು ಕುಳಿತು ಹತ್ತಿರವೇ ಕುಳಿತಿದ್ದ ಭಕ್ತರನ್ನುದ್ದೇಶಿಸಿ ಹೇಳತೊಡಗಿದರು: ''ಠಾಕೂರರ (ಶ್ರೀರಾಮಕೃಷ್ಣರ) ಆದೇಶದಂತೆ ಇಲ್ಲಿಗೆ ಬಂದೆ. ಅದು ೧೮೯೭ರ ಬರಗಾಲ. ಕಲ್ಕತ್ತೆಯಿಂದ ಚಂದನನಗರಕ್ಕೆ ಬಂದೆ. ಅಲ್ಲಿಂದ ನವದ್ವೀಪಕ್ಕೆ ಹೋಗುವ ಇಚ್ಛೆಯಾಯಿತು. ನಂತರ ಗಂಗಾತೀರದಲ್ಲೇ ನಡೆದು ಹೋಗುವ ಇಚ್ಛೆ – ಹೀಗೆ ಬೇಲ್‌ಡಾಂಗಾಕ್ಕೆ ಬಂದಾಗ, ಗಂಗಾತೀರದಲ್ಲಿ ಮುಸಲ್ಮಾನ ಹುಡುಗಿಯೊಬ್ಬಳು ಅಳುತ್ತಿರುವುದನ್ನು ಕಂಡೆ. ಅವಳಲ್ಲಿದ್ದ ಮಡಕೆ ಒಡೆದು ಹೋಗಿತ್ತು. ನನ್ನ ಬಳಿ ಸ್ವಲ್ಪವೇ ಹಣವಿತ್ತು; ಅದರಿಂದಲೇ ಒಂದು ಮಡಕೆಯನ್ನೂ ಸ್ವಲ್ಪ ಅವಲಕ್ಕಿಯನ್ನೂ ಕೊಂಡುಕೊಂಡು ಕೊಟ್ಟೆ. ತಕ್ಷಣವೇ ೧೦–೧೨ ಮಂದಿ ಕ್ಷಾಮಪೀಡಿತ ಜನರು ನನ್ನನ್ನು ಮುತ್ತಿಕೊಂಡು ''ಬಾಬಾ, ತಿನ್ನಲು ಏನಾದರೂ ಕೊಡು'' ಎಂದು ಕೇಳಿದರು. ಅಂದಿನಿಂದ ನಾನು 'ಬಾಬಾ' ಆದೆ. ಉಳಿದಿದ್ದ ಅಲ್ಪ ಹಣದಲ್ಲಿ ಅವರಿಗೆ ಅವಲಕ್ಕಿಯನ್ನು ಕೊಡಿಸಿ ಅಲ್ಲಿಂದ ಮುಂದೆ ಸಾಗಿದೆ. ಸಾಯಂಕಾಲ 'ಭಾವತಾ' ಸ್ಟೇಶನ್ನಿನ ಹತ್ತಿರವೇ ರಾತ್ರಿಯನ್ನು ಕಳೆದೆ. ಬೆಳಿಗ್ಗೆ ಉತ್ತರದಿಕ್ಕಿನಲ್ಲಿ ಹೋಗುವ ಆಸೆಯಾಯಿತು. ಆದರೆ ಮಹುಲಾದಲ್ಲಿ ಅನ್ನಪೂರ್ಣೆಯ ಪೂಜೆಗೆ ಆಮಂತ್ರಣವಿತ್ತು. ಆಮೇಲೆ ಶ್ರೀರಾಮಕೃಷ್ಣರ ಇಚ್ಛೆಯಂತೆ ಅವರ ಕೆಲಸ, ಇಲ್ಲಿಯೇ ನಿಂತುಬಿಟ್ಟೆ.

''ಕ್ಷಾಮಪೀಡಿತ ಪ್ರದೇಶದಲ್ಲಿ ತಾಯಿ ಅನ್ನಪೂರ್ಣೆಯೇ ದೇವತೆ. ಆದ್ದರಿಂದ ಅವರಿಗೆ ಹೊಟ್ಟೆತುಂಬ ಉಣಿಸುವ, ದೇವಸ್ಥಾನವನ್ನು ಕಟ್ಟಿಸುವ ಕೆಲಸ ನನಗೆ ಇಷ್ಟವಿರಲಿಲ್ಲ. ಕೊನೆಗೂ

ಆತನ ಇಚ್ಛೆಯಂತೆಯೇ ನಡೆಯಿತು. ಠಾಕೂರರ ಜನ್ಮತಿಥಿಯ ಪೂಜೆಯಂದು ದೇವಸ್ಥಾನದ ಪ್ರತಿಷ್ಠಾಪನೆ ನಡೆಯಿತು. ಠಾಕೂರರು ಬಂದು ನೆಲೆಸಿದರು. ಆದ್ದರಿಂದ ಈ ದಿನ 'ದೀಯತಾಂ, ಭುಜ್ಯತಾಂ' (ದಾನ ಮಾಡು, ಊಟ ಹಾಕು). ಹಸಿದ ಹೊಟ್ಟೆಗೆ ಧರ್ಮ ಹಿಡಿಸದು. ಕ್ಷಾಮಪೀಡಿತ ಪ್ರದೇಶದಲ್ಲಿ ನಿಜವಾದ ಧರ್ಮವೆಂದರೆ ಊಟ, ವಸ್ತ್ರಗಳ ವ್ಯವಸ್ಥೆ, ನಂತರ ಓದು ಬರಹವನ್ನು ಕಲಿಸುವುದು, ರೋಗಿಗಳ ಸೇವೆಯನ್ನು ಮಾಡುವುದು. ಆದ್ದರಿಂದ ಈ ಜನರಿಗೆ ಕೃಷಿಯ ಕೆಲವು ಆಧುನಿಕ ನಿಯಮಗಳನ್ನೂ, ಆರೋಗ್ಯ ಕಾಪಾಡಿಕೊಳ್ಳುವ ಒಂದೆರಡು ವಿಧಾನಗಳನ್ನೂ ಕಲಿಸುತ್ತೇವೆ.''

**ದಿನಾಂಕ ೧೯ರಂದು ಬೆಳಗ್ಗೆ :** ಬಾಬಾ ಹೇಳಿದರು: '' 'ಗುರುವಾಕ್ಯ ವೇದಾಂತ ವಾಕ್ಯ' ಎಂದು ಎಲ್ಲರೂ ಬಾಯಲ್ಲಿ ಹೇಳುತ್ತಾರೆ. ಹೇಳಿದ್ದನ್ನು ಯಾರೂ ಕೇಳುವುದಿಲ್ಲ, ಒಂದು ಮಾತನ್ನೂ ಉಳಿಸಿಕೊಳ್ಳುವುದಿಲ್ಲ. ಠಾಕೂರರು ನಮಗೆ ಹೆಚ್ಚಾಗಿ ಏನನ್ನೂ ಹೇಳಿಹೋಗಿಲ್ಲ; ಒಂದೆರಡು ವಿಷಯಗಳಷ್ಟೆ : ಮೊದಲನೆಯದಾಗಿ, 'ಗಲ್ಲಕ್ಕೆ ಕೈಕೊಟ್ಟು ಯೋಚಿಸಬೇಡ' ಮತ್ತು ಎರಡನೆಯದಾಗಿ, 'ನಿಂತು ನೀರು ಕುಡಿಯಬೇಡ.' ನಾನು ಎರಡನ್ನೂ ಅಕ್ಷರಶಃ ಪಾಲಿಸಲು ಪ್ರಯತ್ನಿಸಿದ್ದೇನೆ. ಆದರೆ ಈಗಿನ ಹುಡುಗರೊ! ಏನು ಹೇಳುತ್ತೇವೋ ಅದಕ್ಕೆ ವಿರುದ್ಧವಾದುದನ್ನೇ ಮಾಡುತ್ತಾರೆ. ಆದ್ದರಿಂದಲೇ ಅವರಿಗೆ ನಾನೇನೂ ಹೇಳುವುದಿಲ್ಲ. ನಾವು ನಮ್ಮ ಸರದಿಯನ್ನು ಮುಗಿಸಿ ಹೊರಟುಹೋಗುತ್ತೇವೆ. ನಾನೆಂದೂ ಗಲ್ಲಕ್ಕೆ ಕೈಕೊಟ್ಟು ಚಿಂತಿಸಿಲ್ಲ. ಚಿಂತೆಯೇಕೆ? **ಆತನ** ಪ್ರೀತಿ, **ಆತನ** ಆಶ್ರಯ ಸಿಕ್ಕಿದೆ. ಆನಂದದಿಂದ ತುಂಬಿಕೊಂಡಿದ್ದೇನೆ.

ಆ ಯುವಕ ಭಕ್ತ ಕಾಣಿಸಿಕೊಂಡಾಗ ಹೇಳಿದರು, ''ಕೆಲಸ ಮಾಡು, ಕೆಲಸ ಮಾಡು. ಸುಮ್ಮನೆ ಕುಳಿತಿರುವುದನ್ನು ನಾನು ನೋಡಲಾರೆ. ಏನಾದರೊಂದು ಕೆಲಸ ಮಾಡು. ತರಕಾರಿಯನ್ನಾದರೂ ಹೆಚ್ಚಬಹುದು, ಅದಾಗದಿದ್ದರೆ ಪೊರಕೆ ತೆಗೆದುಕೊಂಡು ಕಸವನ್ನಾದರೂ ಗುಡಿಸಬಹುದು. ಎಲ್ಲೆಲ್ಲಿ ಧೂಳು ಇದೆಯೆಂದು ನೋಡು, ಆಶ್ರಮವನ್ನು ಸ್ವಚ್ಛಗೊಳಿಸು.''

**ಮೇ ೨೧:** ಬೀಳ್ಕೊಡುವಾಗ ಕೆಲವರು ಬಾಬಾಗೆ ಹೇಳಿದರು, ''ನೀವು ಇಲ್ಲದಿದ್ದರೆ ಆಗುವುದಿಲ್ಲ, ಬೇಲೂರು ಮಠಕ್ಕೆ ಬನ್ನಿ.'' ಅದಕ್ಕೆ ಬಾಬಾ, ''ಅಯ್ಯೋ! ನನ್ನನ್ನೇನು ಕೊಲ್ಲಬೇಕೆಂದಿದ್ದೀರಾ? ಇಲ್ಲಿ ಈಗ ಠಾಕೂರರಿಗಾಗಿ ಹನ್ನೆರಡು ತಿಂಗಳೂ ಹೂದೋಟವನ್ನು ನೋಡಿಕೊಳ್ಳಬೇಕು, ಹಣ್ಣಿನ ತೋಟವನ್ನು ಮಾಡಬೇಕು. ಇಲ್ಲಿ ಎಷ್ಟೊಂದು ಕೆಲಸವಿದೆ! ನೀವೇ ಎಲ್ಲರೂ ಇಲ್ಲಿಗೆ ಬನ್ನಿ, ಇಲ್ಲೇ ಇರಿ'' ಎನ್ನುತ್ತ ಹುಡುಗನಂತೆ ನಗತೊಡಗಿದರು. ರೈಲಿಗೆ ಸಮಯವಾಯಿತೆಂದು ಎಲ್ಲರೂ ಒಬ್ಬೊಬ್ಬರಾಗಿ ಪ್ರಣಾಮ ಮಾಡಿ ಬೀಳ್ಕೊಂಡರು.

**ಅಕ್ಟೋಬರ್ ೧೧:** ಕೋಜಾಗರೀ ಹುಣ್ಣಿಮೆಯ ಬೆಳಗಿನ ಜಾವ, ಸುಮಾರು ೪.೩೦ರ ಹೊತ್ತಿಗೆ ಎಂದಿನಂತೆ ಹಣ್ಣು, ಸಿಹಿತಿಂಡಿಗಳನ್ನು ತೆಗೆದುಕೊಂಡು ಬಾಬಾಗೆ 'ವಿಜಯ ಪ್ರಣಾಮ' ಮಾಡಲು ಭಕ್ತನು ಬಂದನು. *(ವಿಜಯದಶಮಿಯಂದು ವಿಶೇಷ ನಮಸ್ಕಾರ ಸಲ್ಲಿಸುವುದನ್ನು ಬಂಗಾಳದಲ್ಲಿ 'ವಿಜಯ ಪ್ರಣಾಮ' ಎನ್ನುತ್ತಾರೆ.)*

ಬೆಳಗಿನ ಜಾವದ ಚಂದ್ರನ ಬೆಳಕಿನಲ್ಲಿ ಆಶ್ರಮವು ಅದೆಂಥ ಅಪೂರ್ವ ಶಾಂತ ಸೌಂದರ್ಯಗಳಿಂದ ತುಂಬಿತ್ತೋ ವರ್ಣಿಸಲಾಗದು. ಮುಖ್ಯರಸ್ತೆಯ ಮೂಲಕ ಬಂದು ಡಿಸ್ಪೆನ್ಸರಿಯ ಕಡೆಯಿಂದ ಆಶ್ರಮಕ್ಕೆ ಕಾಲಿಟ್ಟ ಭಕ್ತನು ಆ ನಿರ್ಜನ ನೀರವತೆಯನ್ನು ಸ್ವಲ್ಪ ಹೊತ್ತು ಆಸ್ವಾದಿಸಿದನು. ಇನ್ನೂ ಯಾರೂ ಎಚ್ಚೆತ್ತಿಲ್ಲ; ನೀಲಗಿರಿ ಮರಗಳು ಕಾವಲುಗಾರರಂತೆ ನಿಂತಿವೆ, ಅವುಗಳು ಹೊರಸೂಸುವ ತೀಕ್ಷ್ಣವಾದ ಸುಗಂಧವು ಬೀಸುತ್ತಿದ್ದ ತಂಗಾಳಿಗೆ ಜೀವವಿತ್ತಂತಿದೆ.

ಸ್ವಲ್ಪ ಹೊತ್ತಿನಲ್ಲೇ ವಿನೋದ ಕುಟೀರದಲ್ಲಿ 'ಖಟ್' ಎಂದು ಸದ್ದಾಯಿತು. ಬಾಬಾ ಎದ್ದಿದ್ದಾರೆ. ಮುಖ, ಕೈಕಾಲುಗಳನ್ನು ತೊಳೆದು ಬರುತ್ತಲೇ, ನಸುಗತ್ತಲೆಯ ಬ್ರಾಹ್ಮೀಮುಹೂರ್ತದಲ್ಲಿ ಭಕ್ತನು ಬಾಬಾಗೆ ಪ್ರಣಾಮ ಮಾಡಿದನು. ಬಾಬಾ ಕನವರಿಸುತ್ತ ಕೇಳಿದರು, ''ನನಗಾಗಿ ಏನೇನು ತಂದಿದ್ದೀಯಾ? ಅದನ್ನು ಇಲ್ಲಿ ಕೊಡು, ಈ ಕೊಠಡಿಯಲ್ಲಿಡು. ಮತ್ತು ಠಾಕೂರರಿಗಾಗಿ ತಂದಿರುವುದನೆಲ್ಲಾ ಠಾಕೂರರ ಭಂಡಾರಕ್ಕೆ ತೆಗೆದುಕೊಂಡು ಹೋಗು.''

ಬೆಳಗ್ಗೆ ಹಾಲ್‌ನಲ್ಲಿ ಒಂದು ಕುರ್ಚಿಯ ಮೇಲೆ ಬಾಬಾ ಕುಳಿತಿದ್ದಾರೆ. ಅವರಲ್ಲಿ ಜಪದ ಭಾವ ತುಂಬಿಕೊಂಡಿದೆ, ಆದರೆ ದೇಹದಲ್ಲಿ ಅನಾರೋಗ್ಯ. ಭಕ್ತ ಕುರ್ಚಿಯ ಬಳಿ ಸುಮ್ಮನೆ ಕುಳಿತಿದ್ದಾನೆ. ಬಾಬಾ ಕೈಮುಗಿದು ಶುದ್ಧ ಸಂಸ್ಕೃತ ಉಚ್ಚಾರಣೆಯಲ್ಲಿ ಕ್ರಮಬದ್ಧವಾಗಿ ದೇವೀಸೂಕ್ತವನ್ನು ಪಠಿಸುತ್ತಿದ್ದಾರೆ:

**ಓಂ ಅಹಂ ರುದ್ರೇಭಿರ್ವಸುಭಿಶ್ಚರಾಮ್ಯಹಮಾದಿತ್ಯೈರುತ ವಿಶ್ವದೇವೈಃ।**
**.. ಪರೋ ದಿವಾ ಪರಏನಾ ಪೃಥಿವ್ಯೈ ತಾವತೀ ಮಹಿನಾ ಸಂಬಭೂವ ॥**

ಸಂಜೆಯ ವೇಳೆ ಬಾಬಾ ಹೇಳುತ್ತಿದ್ದಾರೆ:

**ನಾಯಮಾತ್ಮಾ ಬಲಹೀನೇನ ಲಭ್ಯಃ**
**ನ ಮೇಧಯಾ ನ ಬಹುನಾ ಶ್ರುತೇನ ।**
**.. ನ ಪ್ರವಚನೇನ ನ ಚೇಜ್ಯಯಾ**
**ಯಮೇವೈಷ ವೃಣುತೇ ತೇನ ಲಭ್ಯಃ ॥**

**'ನಾಯಮಾತ್ಮಾ ಬಲಹೀನೇನ ಲಭ್ಯಃ** – ತಿಳಿಯಿತೆ? ಮೊದಲು ಶರೀರವನ್ನು ಶಕ್ತಿಯುತವಾಗಿ ಮಾಡಿಕೊಳ್ಳಬೇಕು. Healthy strong body (ಆರೋಗ್ಯಕರ, ಸದೃಢ ದೇಹ) ಇದ್ದರೆ ಮಾತ್ರ (ಆರೋಗ್ಯಪೂರ್ಣವಾದ ವಿಚಾರಗಳು) ಬರುತ್ತವೆ. ಅದು ಇಲ್ಲದಿದ್ದರೆ ಮನಸ್ಸಿಗೆ ಬೇಡದ ಯೋಚನೆಗಳು ಬರುವುವು. ಹಾಲು, ಖೋವಾ, ಮೀನು, ಮಾಂಸ, ಮೊಸರು – ಎಲ್ಲವನ್ನೂ ಸೇವಿಸಬೇಕು ಅನ್ನಿಸುತ್ತದೆ. Fruits are good in morn (ಬೆಳಗ್ಗೆ ಹಣ್ಣುಗಳನ್ನು ತಿಂದರೆ ಬಹಳ ಒಳ್ಳೆಯದು). ಮುಸಂಬಿ ತಿನ್ನಬೇಕು. ಲಿವರ್ ಚೆನ್ನಾಗಿರುತ್ತದೆ. ಇದು ನೀನು ಮಾಡಿಕೊಳ್ಳಬೇಕಾದ ಆಹಾರ ವ್ಯವಸ್ಥೆ.

ಠಾಕೂರರು ಸಮಷ್ಟಿರೂಪದಲ್ಲಿ 'ಠಾಕೂರ್' – ವ್ಯಷ್ಟಿ ರೂಪದಲ್ಲಿ ಇಲ್ಲಿ ಅನ್ನಪೂರ್ಣೆ. 'ವಿಜಯಾ ಪತ್ರ'ಗಳನ್ನು *(ವಿಜಯದಶಮಿಯಂದು ಸ್ನೇಹಿತರಿಗೆ, ಬಂಧುಗಳಿಗೆ ಬರೆಯುವ ಶುಭಹಾರೈಕೆಯ ಪತ್ರಕ್ಕೆ ಬಂಗಾಳದಲ್ಲಿ ಹೀಗೆನ್ನುತ್ತಾರೆ.)* ಬರೆಯುತ್ತಿದ್ದಾರೆ.

ಬಾಬಾ ಹೇಳಿದರು, '' 'ವಿಜಯಾ ಪತ್ರ'ಗಳನ್ನೋದಿ ಏನೇನು ಬರೆಯಬೇಕೋ ಅದನ್ನು ನೀನೇ ಬರೆ. ಇಂಗ್ಲಿಷಿನಲ್ಲಿ ಬರೆದಿರುವವರಿಗೆ ಇಂಗ್ಲಿಷ್‌ನಲ್ಲೇ ಉತ್ತರಿಸು. ಭಯಪಡಬೇಡ. ಪತ್ರದ ಭಾವವನ್ನರಿತು ನೀನು ಹೇಗೆ ಬರೆಯುತ್ತೀಯೆಂದು ನಾನು ನೋಡಬೇಕು. ನಿನಗೆ full freedom (ಪೂರ್ಣ ಸ್ವಾತಂತ್ರ್ಯ) ಕೊಡುತ್ತಿದ್ದೇನೆ. ತಪ್ಪೇ ಆಗಲಿ, ಉಲ್ಟಾವೇ ಆಗಲಿ – ನೀನು ಬರೆ, ನಾನು ನೋಡುತ್ತೇನೆ.''

.. ಯಾರದೋ ನಡವಳಿಕೆಯಿಂದ ದುಃಖಿತರಾಗಿ ಕಟುವಾಗಿಯೇ ನುಡಿದರು, ''ಎಲ್ಲರೂ ಸ್ವಾರ್ಥಿಗಳು. ಅವರ ಕೆಲಸವಾದರೆಸರಿ. ನನ್ನ ಕಷ್ಟವನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ.''

ಸಂಜೆ ಚಿಕ್ಕ ಹುಡುಗರಿಂದ ಬಾಬಾ 'Son of King' ಹಾಗೂ 'ಕಾರಕೊರಮ್ ಪರ್ವತ'ದ ಕತೆಗಳನ್ನು ಕೇಳಿ ಬಹಳ ಸಂತೋಷಗೊಂಡಿದ್ದಾರೆ. ''ಭಾರೀ ಆನಂದವಾಯಿತು. ಮತ್ತೆ ಕೇಳುತ್ತೇನೆ. ಅದೇ ಕಾರಕೊರಮ್ ದಾಟಿ Central Asia (ಮಧ್ಯ ಏಷ್ಯಾ)ಗೆ ಹೋಗಿಬಿಡುತ್ತೇನೆಂದು ನಿಶ್ಚಯಿಸಿದ್ದೆ '' ಎಂದರು.

''.. .. ಮುಂದಿನ ಸಲ ಬಂದಾಗ ಬಹಳ ದಿನಗಳ ಟಿಕೆಟ್ ಮಾಡಿಕೊಂಡು ಬನ್ನಿ. ಆರು ದಿನಗಳ ರಿಟರ್ನ್ ಟಿಕೆಟ್ ಒಂದಿದೆ. ನನ್ನ ಕೆಲಸ ಮುಗಿಸದಿದ್ದರೆ ಹೋಗಲು ಬಿಡುವುದಿಲ್ಲ.'' ಐದು ಗಂಟೆಯ ರೈಲಿಗೆ ಹೊರಡುವ ಭಕ್ತರೆಂದರು, ''ಇನ್ನು ಸಮಯವಿಲ್ಲ, ನಾಲ್ಕುಗಂಟೆಯಾಗಿ ಹೋಗಿದೆ.'' ಬಾಬಾ, ''ಬಹಳ ಸಮಯವಿದೆ. ಎಲ್ಲರೂ ನನ್ನ ಹತ್ತಿರ ಕುಳಿತುಕೊಳ್ಳಿ'' ಎನ್ನುತ್ತಾ ತಾವು ಪತ್ರ ಬರೆಯಲು ಕುಳಿತರು. ಭಕ್ತರು ಚಡಪಡಿಸುತ್ತಿದ್ದಾರೆ, ಬಾಬಾ ನಗುತ್ತಿದ್ದಾರೆ. ಕೊನೆಗೆಂದರು, ''ಹೋಗಲೇಬೇಕೆಂದಿದ್ದೀರಿ, ಎಲ್ಲರೂ ಪ್ರಣಾಮ ಮಾಡಿ. ಮತ್ತೆ ಬೇಗನೆ ಬನ್ನಿ.''

**ಜನವರಿ ೧೫, ೧೯೩೬:** ಸ್ವಾಮೀಜಿಯ ಜಯಂತಿ ಪೂಜೆ. ಮುಂಜಾನೆ ಚಳಿಯಲ್ಲಿ ನಡುಗುತ್ತ ಭಕ್ತನು ತನ್ನ ಪ್ರೀತಿಯ ಸಾರಗಾಛಿ ಆಶ್ರಮಕ್ಕೆ ಬಂದು ತಲುಪಿದನು.

ಈ ಸಲವೂ ಕಳೆದ ಬಾರಿಯಂತೆ ಬೆಳಗಿನ ಮಬ್ಬುಗತ್ತಲಲ್ಲಿ ಬಾಬಾರ ದರ್ಶನವಾಯಿತು. ಈ ಬಾರಿಯೂ ಮೊದಲ ಪ್ರಶ್ನೆ ಅದೇ: ''ನನಗೋಸ್ಕರ ಏನೇನು ತಂದಿರುವೆ? ಅದನ್ನು ನನಗೆ ಕೊಡು. ಠಾಕೂರರಿಗೆ ಏನೇನು ತಂದಿರುವೆ? ಅದನ್ನು ಆ ಕೊಠಡಿಗೆ ತೆಗೆದುಕೊಂಡು ಹೋಗು.''

ಬೆಳಗ್ಗೆ ಅವರ ಬಳಿ ಕುಳಿತುಕೊಳ್ಳುತ್ತಲೇ ಅವರು ಹೇಳಿದರು: ''ಈಗ ಇಲ್ಲಿ ಕುಳಿತುಕೊಳ್ಳುವುದಲ್ಲ, ಹೋಗು, ದೇವರಮನೆಯಲ್ಲಿ ಕೆಲಸ ಮಾಡು, ಹೋಗು. ಹಣ್ಣುಗಳನ್ನು ಹೆಚ್ಚಲು ಬರುತ್ತದೆ ತಾನೆ?''

ಮಧ್ಯಾಹ್ನ ಉತ್ಸವ ಇತ್ಯಾದಿ ನಡೆದವು. ಸಂಜೆ ಪೂರ್ವ ಬಂಗಾಳದಿಂದ ಬಂದ ದೀಕ್ಷಾರ್ಥಿಯೊಬ್ಬನು ಕೇಳುತ್ತಿದ್ದಾನೆ: ''ನಿಮಗೆ ಠಾಕೂರರ ನೆನಪು ಬಹಳವಾಗಿ ಆಗುತ್ತದೆಯೆ?'' ಬಾಬಾ ಉತ್ತರಿಸಿದರು, ''ಆಗುತ್ತದೆ ಎಂದರೇನು? ಚೆನ್ನಾಗಿಯೇ ಆಗುತ್ತದೆ. ಅವರ ನೆನಪಲ್ಲದೆ ಇನ್ನು ಯಾರ ನೆನಪಾಗಬೇಕು?''

**ದೀಕ್ಷಾರ್ಥಿ:** 'ಕಥಾಮೃತ' (ಶ್ರೀರಾಮಕೃಷ್ಣ ವಚನವೇದ)ದಲ್ಲಿ ನಿಮ್ಮ ವಿಷಯವೇ ಇಲ್ಲ. ಒಂದೆರಡು ಕಡೆ ಬರೀ ಹೆಸರಿದೆ ಅಷ್ಟೆ.

**ಬಾಬಾ:** ಎಂದರೆ, ನಾನವರ ಬಳಿ ಹೋಗಲಿಲ್ಲ!

ಸರಳನಾದ ದೀಕ್ಷಾರ್ಥಿಯು ಸುಮ್ಮನಾದನು.

**ಬಾಬಾ:** ನಿಜ ಸಂಗತಿಯೇನು ಗೊತ್ತೆ? ಮಾಸ್ಟರ್ ಮಹಾಶಯರು ರಜಾದಿನಗಳಂದು ಹೋಗುತ್ತಿದ್ದರು. ಆ ದಿನ ಗೃಹಸ್ಥ ಭಕ್ತರು ಬಹಳ ಮಂದಿ ಸೇರುತ್ತಿದ್ದರು. ಹಾಗೂ ನಾವು ಬೇರೆ ದಿನಗಳಂದು ಹೆಚ್ಚಾಗಿ ಹೋಗುತ್ತಿದ್ದೆವು. ರಾತ್ರಿ ಅಲ್ಲೇ ಕಳೆಯುತ್ತಿದ್ದು , ಹಗಲು ಹೊತ್ತು ಠಾಕೂರರ ಕೋಣೆಯಲ್ಲಿ ಹೆಚ್ಚು ಜನರಿರುತ್ತಿದ್ದರೆ, ಶಿವಮಂದಿರಕ್ಕೆ ಅಥವಾ ಪಂಚವಟಿಗೆ ಓಡುತ್ತಿದ್ದೆವು.

ಮರುದಿನ ಸಂಜೆ ಭಕ್ತನು ಕೇಳಿಕೊಂಡ, ''ಠಾಕೂರರ ಬಗ್ಗೆ ಏನಾದರೂ ಹೇಳಿ '' ಎಂದು. (ಈ ದಿನವೇ ಬೆಳಗ್ಗೆ ಅವನಿಗೆ ಮಂತ್ರದೀಕ್ಷೆಯಾಗಿತ್ತು.)

**ಬಾಬಾ :** ಏನು ಹೇಳಲಿ, ಹೇಳು?

**ಭಕ್ತ :** ಅವರ ಬಗ್ಗೆ ನಿಮ್ಮಿಂದಲೇ ಕೇಳಬೇಕೆಂಬ ಆಸೆ. ಅವರನ್ನು ಯಾವಾಗ ನೋಡಿದಿರಿ ಮತ್ತು ಹೇಗೆ? ಆ ದಿನದ ವಿಷಯ ಪುಸ್ತಕದಲ್ಲಿಲ್ಲ. ನಾನು ಇನ್ನು ಯಾವಾಗ ಬರುತ್ತೇನೋ ಏನೋ.

**ಬಾಬಾ :** ಮೊದಲ ಬಾರಿ ಭೇಟಿಯಾದಾಗ, ನಾನಿನ್ನೂ ತುಂಬ ಚಿಕ್ಕ ಹುಡುಗ. ಚಿಕ್ಕಂದಿನಲ್ಲಿ ಬಟ್ಟೆಯನ್ನು ಸೊಂಟದ ಮೇಲೆ ಉಟ್ಟು ಶೌಚಕ್ಕೆ ಹೋಗುತ್ತಿದ್ದೆ. ಅನಂತರ ಶುಚಿ ಮಾಡಿಕೊಳ್ಳಲು ಗಂಗೆಗೆ ಹೋಗುತ್ತಿದ್ದೆ. ಆಗ ಅವರು ಭಕ್ತರೊಂದಿಗೆ ಕುಳಿತ್ತಿದ್ದರು. ಅವರು ನನ್ನನ್ನು ನೋಡಿದರು, ಆಗ ಗಂಗೆಯ ನೀರು ಇಳಿಮುಖವಾಗಿತ್ತು – ನಾನು ನೀರಿಗೆ ಬಹಳಷ್ಟು ಇಳಿದಿದ್ದೆ. ಅವರು ನನ್ನನ್ನು ಕರೆದರು, ''ಅಯ್ಯಾ, ಅಲ್ಲಿಗೆ ಹೋಗಬೇಡ! ಅಲ್ಲಿಗೆ ಹೋಗಬೇಡ! ಹಂಸಪುಕುರಕ್ಕೆ ಹೋಗು. ಗಂಗಾವಾರಿ ಬ್ರಹ್ಮವಾರಿ. ಅದರಲ್ಲಿ ಶುಚಿ ಮಾಡಿಕೊಳ್ಳುವುದೆ?'' ನಾನೂ ಬಿಡುವ ಹುಡುಗನಲ್ಲ. ನಾನೆಂದೆ, ''ಇಲ್ಲಿ ಗಂಗೆಯನ್ನು ಬಿಟ್ಟರೆ ಬೇರಾವ ನೀರೂ ಇಲ್ಲವಲ್ಲ?'' ಠಾಕೂರರೆಂದರು, ''ಇಲ್ಲಿಯ ವಿಷಯವೇ ಬೇರೆ.''

''ದಕ್ಷಿಣೇಶ್ವರದಲ್ಲಿ ಠಾಕೂರರ ಕೋಣೆಯು ಸದಾ ಭಗವದ್ಭಾವದಿಂದ ತುಂಬಿ ತುಳುಕುತ್ತಿತ್ತು! ಸಾಮಾನ್ಯವಾಗಿ ಎಲ್ಲರಿಗೂ ಅನುಭೂತಿಗಳಾಗುತ್ತಿದ್ದವು. ಸಹಜವಾಗಿಯೆ ಆಧ್ಯಾತ್ಮಿಕ ಪ್ರೇರಣೆಯಾಗುತ್ತಿತ್ತು. ನೂರಾರು ಜನ್ಮಗಳ ಸಾಧನೆಯ ಫಲವು ಅಲ್ಲಿ ಧ್ಯಾನಕ್ಕೆ ಕುಳಿತರೆ ಲಭ್ಯವಾಗುತ್ತಿತ್ತು. ಠಾಕೂರರಿಗಾದರೋ ಆಗಾಗ ಭಾವಸಮಾಧಿಯುಂಟಾಗುತ್ತಿತ್ತು. ಈ ಕ್ಷಣ ಸಮಾಧಿ ಭಂಗವಾದರೆ ಮತ್ತೆ ಸಮಾಧಿಯುಂಟಾಗುತ್ತಿತ್ತು. ಇವೆಲ್ಲಾ ಹೇಳುವಂಥವೆ? ಅವರ ಒಂದೊಂದೇ ಮಾತುಗಳ ಮೂಲಕ ವೇದವೇದಾಂತವನ್ನರಿಯುವುದು ಎಷ್ಟೊಂದು ಸುಲಭವಾಗಿಬಿಡುತ್ತಿತ್ತು!

''ಠಾಕೂರರು ನನಗೆಂದರು, ನಿನಗೆ ನರೇಂದ್ರನ ಪರಿಚಯವಿದೆಯೆ? ಅವನು ಕಲ್ಕತ್ತೆಯ ಹುಡುಗ. ಅವನದು ಬೊಗಸೆಗಣ್ಣು

ಗಳು – ಅವು ಹೊರನೋಡುತ್ತಿರುವಂತೆ ಇವೆ, ಆದರೆ ನಿಜವಾಗಿ ಅಂತರ್ಮುಖಿ. ಅವನೊಡನೆ ಹೆಚ್ಚಾಗಿ ಒಡನಾಡು. ಮಾರನೆಯ ದಿನವೇ ನಾನು ಸ್ವಾಮೀಜಿ ಬಳಿಗೆ ಹೋದೆ, ಅವರಿಂದ ಆಕರ್ಷಿತ ನಾದೆ. ಅನಂತರ ನೆರಳಿನಂತೆ ಅವರೊಡನೆ ಸುತ್ತಾಡಿದ್ದೇನೆ.

''ಆಗ ನಾನು ಬಹಳ ಆಚಾರವಂತನಾಗಿದ್ದೆ. ಸಸ್ಯಾಹಾರವನ್ನೇ ತೆಗೆದುಕೊಳ್ಳುತ್ತಿದ್ದೆ. ಸ್ವಾಮೀಜಿ ಅದಕ್ಕೇ ನನ್ನನ್ನು ಬಯ್ಯುತ್ತಿದ್ದರು. ಅವರೆನ್ನುತ್ತಿದ್ದರು, 'ಅವೆಲ್ಲ ಬಿಟ್ಟುಬಿಡು. ಮೀನು, ಮಾಂಸ ತಿನ್ನು. ಧರ್ಮಕ್ಕೂ ಇದಕ್ಕೂ ಸಂಬಂಧವಿಲ್ಲ.' ನಾನವರ ಮಾತನ್ನು ಕೇಳು ತ್ತಿರಲಿಲ್ಲ. ನನ್ನನ್ನೊಪ್ಪಿಸಲು ಅವರಿಗೂ ಸಾಧ್ಯವಾಗುತ್ತಿರಲಿಲ್ಲ. ಆದ್ದ ರಿಂದಲೇ ಅವರ ಉತ್ಸವದಂದು ಮೀನುಗೀನು ಇಲ್ಲದಿದ್ದರೆ ದುಃಖ ವಾಗುತ್ತದೆ. ಆಶ್ಚರ್ಯವೆಂದರೆ ಇದೇ ನೋಡು – ನಿನ್ನೆ ಎಷ್ಟೊಂದು ಮೀನು ಬಂದವು; ಎಲ್ಲರೂ ತಿಂದಿರಿ! ಭಕ್ತರು ಹಾಗೂ ಅವರ ದರಿದ್ರ ನಾರಾಯಣರು!

''ಠಾಕೂರರು ಹೇಳುತ್ತಿದ್ದರು, 'ಏಕೆ ಆಚಾರವಂತನಾಗಬೇಕು? ಹೋಗು, ಕಾಳಿಯ ಗುಡಿಯಲ್ಲಿ ಪ್ರಸಾದವನ್ನುಂಡು ಬಾ' ಅಂತ. ನನಗೆ ಅದು ಇಷ್ಟವಾಗುತ್ತಿರಲಿಲ್ಲ, ಅದನ್ನು ತಿಳಿದ ಠಾಕೂರರು ನಾನು ಯಾವ ಗುಡಿಗೆ ಹೋಗುತ್ತಿದ್ದೆನೆಂದು ನೋಡುತ್ತಿದ್ದರು– ಕಾಳಿಯ ಗುಡಿಗೋ, ವಿಷ್ಣುವಿನ ಗುಡಿಗೋ ಅಂತ. ಕಾಳಿಯ ದೇವಸ್ಥಾನಕ್ಕೆ ಹೋಗುತ್ತಿದ್ದೆ , ಪ್ರಸಾದವನ್ನು ತಿಂದಾದ ಮೇಲೆ, 'ಅಮ್ಮಾ, ಇವೆಲ್ಲಾ ತಿನ್ನದಿದ್ದರೆ ನಿನಗೇನು ಸರಿಯೆನಿಸುವುದಿಲ್ಲವೆ?' ಎಂದುಕೊಳ್ಳುತ್ತಿದ್ದೆ. ಹೀಗೆ ಅದೆಷ್ಟು ವಿಷಯಗಳು! ಹೇಳುತ್ತಾ ಹೋದರೆ ಮುಗಿಯುವುದಿಲ್ಲ. ಠಾಕೂರರು ಪ್ರಕಾಶಗೊಂಡದ್ದು ಎಷ್ಟು? One fourth (ಕಾಲು ಭಾಗ) ಅಥವಾ ಕಾಲು ಭಾಗದ ಕಾಲು ಅಂಶ!

''ಸ್ವಾಮೀಜಿಯ ಮಾತುಗಳು ಅದೆಷ್ಟು ಜ್ಞಾಪಕಕ್ಕೆ ಬರುತ್ತವೆ! ಸ್ವಾಮೀಜಿ ಯಾವಾಗ ಏನನ್ನು ಒತ್ತಿ ಹೇಳುತ್ತಿದ್ದರೋ, ಕೇಳಿದವರಿಗೆ ಅದೇ ಸತ್ಯ, ಮಿಕ್ಕವೆಲ್ಲ ಏನೂ ಇಲ್ಲ ಅನ್ನಿಸುತ್ತಿತ್ತು. ಬೇಲೂರಿನ ಗಂಗಾ ತೀರದಲ್ಲಿ ಎಷ್ಟು ದಿನ, ಎಷ್ಟು ಭಾವಗಳು! ಯಾವ ದಿನ ಯಾವ ರೀತಿಯ ಭಾವವೋ ಆ ದಿನ ಬೇಲೂರು ಮಠದಲ್ಲಿ ಅದೇ ಭಾವವಿರು ತ್ತಿತ್ತು. ಶಿವನ ಬಗ್ಗೆ ಮಾತನಾಡಿದ ದಿನ, ಸ್ವಾಮೀಜಿಯೇ ಸಾಕ್ಷಾತ್ ಶಿವ, ಶಂಕರ ಎನ್ನಿಸುತ್ತಿತ್ತು. ಇಡೀ ಮಠದಲ್ಲಿ ಅದೇ ಭಾವ. ಬುದ್ಧನ ವಿಚಾರವಾಗಿ ಮಾತನಾಡಿದಂದು ಇದೊಂದು ಬೌದ್ಧಮಠವೆಂದು ಭಾಸವಾಗುತ್ತಿತ್ತು. ಎಲ್ಲವೂ ಶಾಂತ, ಸ್ಥಿರ. ಅವರು ಎಂದು ರಾಧಾ ರಾಣಿಯ ವಿಷಯವಾಗಿ ಮಾತನಾಡುತ್ತಿದ್ದರೋ, ಅಂದು ಎಲ್ಲಾ ಬಂಧನಗಳನ್ನೂ ಕಿತ್ತೊಗೆದು ಅವರು ವ್ರಜಗೋಪಿಯಾದಂತೆ ತೋರುತ್ತಿದ್ದು, ಮಠವೆಲ್ಲ ಸುಮಧುರ ಗೋಪೀಭಾವದಿಂದ ತುಂಬಿ ದಂತಿರುತ್ತಿತ್ತು. ಸ್ವಾಮೀಜಿ ಅನೇಕ ಬಾರಿ ಹೇಳಿದ್ದಾರೆ:

Radha was not of flesh and blood
Radha was a froth of flesh in the ocean of love

'ರಾಧೆ ರಕ್ತ-ಮಾಂಸಗಳಿಂದ ಕೂಡಿದವಳಲ್ಲ, ಆಕೆ ಪ್ರೇಮ ಸಮುದ್ರದಲ್ಲಿನ ಒಂದು ಬುದ್ಬುದ'

**೧೭ ನೇ ಜನವರಿ:** ಸಂಜೆ ಬ್ರಹ್ಮಚಾರಿ ಆದಿಚೈತನ್ಯ (Rudolf Ady- ಜರ್ಮನ್) ಮೊದಲನೇ ಮಹಾಯುದ್ಧದ ನಂತರ ವೈರಾಗ್ಯಹೊಂದಿ ಅಮೆರಿಕಾಗೆ ಹೋದರು. ಅಲ್ಲಿ Vedantha Society(ವೇದಾಂತ ಸೊಸೈಟಿ)ಯ ಸಂಪರ್ಕಕ್ಕೆ ಬಂದು ಭಾರತಕ್ಕೆ ಆಗಮಿಸಿದರು. ಅನೇಕ ಹಣ್ಣು – ಸಿಹಿತಿಂಡಿಗಳನ್ನು ತೆಗೆದುಕೊಂಡು (ಸಾರಗಾಛಿಗೆ) ಬಂದಿದ್ದಾರೆ. ನೆಲದ ಮೇಲೆ ಕುಳಿತು, ಪಾದಗಳಿಗೆ ತಮ್ಮ ಶಿರವನ್ನು ಮುಟ್ಟಿಸಿ ಬಾಬಾಗೆ ಪ್ರಣಾಮ ಮಾಡಿದ್ದಾರೆ. ಬಾಬಾ ನಮ್ಮೆಡೆ ತಿರುಗಿ ಹೇಳಿದರು, ''ನೋಡಿ ನೋಡಿ, ಇವರಿಂದ ಕಲಿಯಿರಿ. ಭಕ್ತಿಯನ್ನು ಕಲಿಯಿರಿ. ಮಾಡಬೇಕಾದ್ದನ್ನು ಮಾಡುವವ ರೆಂದರೆ ಇವರೇ – ಧ್ಯಾನ, ಧಾರಣೆ, ತ್ಯಾಗ, ತಪಸ್ಸು. ಅವರಲ್ಲಿ ದೃಢತೆಯಿದೆ, ಇಲ್ಲವಾದರೆ ಹೇಗೆತಾನೆ ಸಾಧ್ಯ? ಎಲ್ಲರೂ ಬಂದು ದೀಕ್ಷೆಯನ್ನು ಪಡೆದು ಹೋಗುತ್ತಾರೆ. ನಂತರ ಅವರೇನು ಮಾಡುತ್ತಾರೆಂದು ತಿಳಿಯಲು ನನಗೂ ಸಾಧ್ಯವಿಲ್ಲ. ಎಲ್ಲವನ್ನೂ ಸಾವಧಾನದಿಂದ ಉಪಯೋಗಿಸಿಕೊಳ್ಳುವ ಬಗೆ ಅವರಿಗೆ ತಿಳಿದಿದೆ. ಇದರೊಳಗೆ ಅದೇನನ್ನು ನೋಡುತ್ತಾರೋ, ನನಗೇನು ಗೊತ್ತು? ಆ ದಿನ ಅವನು, 'ಬಾಬಾ, ಗಂಗಾಸ್ನಾನಕ್ಕೆ ಹೋಗುತ್ತೇನೆ,' ಎಂದಾಗ ಬೇಡವೆಂದೆ. ಹಳ್ಳಿಯ ರಸ್ತೆಗಳು, ವೈಶಾಖ – ಜ್ಯೇಷ್ಠಮಾಸ. ಕೊನೆಗೆ, ಯಾರನ್ನಾದರೂ ಜೊತೆಯಲ್ಲಿ ಕರೆದುಕೊಂಡು ಹೋಗಲು ಹೇಳಿದೆ. ಗಂಗೆಯ ಮೇಲೆ ಯಾರಿಗೆ ಭಕ್ತಿಯುಂಟಾಗಿದೆಯೋ, ಅವರಿಗಿನ್ನೇನು ಬೇಕು?''

ಸ್ನಾನವನ್ನು ಮುಗಿಸಿ ಮರಳಿ ಬಂದ ದಂಡಕಮಂಡಲುಧಾರಿ ಗೌರವರ್ಣದ ಬ್ರಹ್ಮಚಾರಿ ಬಂದು ನಮಸ್ಕರಿಸಿದನು. ನನಗೆ ಅವ ನನ್ನು ಗುರುತಿಸಲಾಗಲಿಲ್ಲ. ಅವನು ಸಾಕ್ಷಾತ್ ಶಿವನಂತೆ ಕಂಡನು.

**೧೮ನೇ ಜನವರಿ:** Miss. Mcleod (ಮಿಸ್ ಮ್ಯಾಕ್‌ಲೌಡ್), Mr. & Mrs. Brewster (ಶ್ರೀಮತಿ ಹಾಗೂ ಶ್ರೀ ಬ್ರೂಸ್ಟರ್) ಕಲಾವಿದರನ್ನು ಜೊತೆಯಲ್ಲಿ ಕರೆದುಕೊಂಡು Ady(ಆದಿಚೈತನ್ಯ) ಮತ್ತೆ ಬಂದಿದ್ದಾನೆ. ಸೆಲೂನು ಗಾಡಿ ರೈಲ್ವೆಯ ಸೈಡಿಂಗ್‌ನಲ್ಲೇ ಇದೆ. ಮಿಸ್ ಮ್ಯಾಕ್‌ಲೌಡ್ ಹಿಂದೆಂದೂ ಸಾರಗಾಛಿಯನ್ನು ನೋಡಿರ ಲಿಲ್ಲ, ಬಹಳ ದಿನಗಳಿಂದ ನೋಡಬೇಕೆಂಬ ಆಸೆ ಆಕೆಗಿತ್ತು. ಆದ್ದರಿಂದ ಬಂದಿದ್ದಾರೆ. ಉಪಹಾರವನ್ನು ತಮ್ಮೊಡನೆಯೇ ತಂದಿ ದ್ದಾರೆ. ಅಡುಗೆಯವನೂ ಜೊತೆಯಲ್ಲಿದ್ದಾನೆ. ಆಶ್ರಮದಿಂದ ಅವರಿಗೆ ಬೇಕಾದುದು ಹಾಲು ಮಾತ್ರವೆ.

ಎಲ್ಲರ ಉಪಹಾರದ ನಂತರ ಇಬ್ಬರೂ ಶ್ರೀರಾಮಕೃಷ್ಣರ ಮಂದಿರದ ನೆಲದ ಮೇಲೆ ಕುಳಿತು ಮಾತನಾಡುತ್ತಿದ್ದಾರೆ. ಮಿಸ್ ಮ್ಯಾಕ್ಲೌಡ್‌ನ ಪ್ರಶ್ನೆಗಳಿಗೆ ಬಾಬಾ ಉತ್ತರಿಸುತ್ತಿದ್ದಾರೆ.

**Sw. A :** Yes, I have seen Swamiji after his passing away as clearly as I see you now, otherwise I could not live. Seperation was so painful! I was going to commit sucide but was prevented by Swamiji. He caught my hand when I was about to jump under the running tram.